


**ಕೆ.ಎಸ್.ನಂದಕುಮಾರ್**

*ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಮೌಲ್ಯಪ್ರಜ್ಞೆಯನ್ನು ಬೆಳೆಸಿಕೊಳ್ಳಲು ನೆರವಾಗುವಂಥ ಕಾರ್ಯಾಗಾರಗಳನ್ನು ನಡೆಸುವ ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂಥ ಕೈಪಿಡಿಗಳನ್ನು ಹೊರತಂದಿರುವ ದಾವಣಗೆರೆಯ ಶ್ರೀ ಕೆ.ಎಸ್. ನಂದಕುಮಾರರು ವೃತ್ತಿಯಲ್ಲಿ ವ್ಯಾಪಾರಸ್ಥರಾದರೂ ಪ್ರವೃತ್ತಿಯಿಂದ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಕಾಳಜಿಯುಳ್ಳವರಾಗಿದ್ದಾರೆ.*

ವ್ಯಕ್ತಿ ಮತ್ತು ಸಮಾಜ

**ಮಾ**ನವ ಸಂಘಜೀವಿ. ಒಬ್ಬನೇ ಜೀವಿಸಲಾರ. ಒಬ್ಬನೇ ಎಲ್ಲವನ್ನೂ ಮಾಡಲಾರ, ಮಾಡಿಕೊಳ್ಳಲಾರ. ಒಬ್ಬರ ಮೇಲೆ ಮತ್ತೊಬ್ಬರ ಅವಲಂಬನೆ ಅನಿವಾರ್ಯ. ಗಂಡ, ಹೆಂಡತಿ, ಕುಟುಂಬ, ಸಮಾಜ ಎಲ್ಲವೂ ಇದೇ ತಳಹದಿಯ ಮೇಲೆ ನಿರ್ಮಾಣವಾಗಿದೆ. ಇಂದಿನ ವಿದ್ಯಾಭ್ಯಾಸ, ಶಿಕ್ಷಣ, ಈ ಸತ್ಯವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವಲ್ಲಿ ವಿಫಲವಾಗಿದೆ. ಇಂದಿನ ವಿದ್ಯಾರ್ಥಿಯೇ ಮುಂದಿನ ಪ್ರಜೆ. ಅವನು ಸರಿಯಾಗಿ ಕೆಲಸ ಮಾಡದೆ ಸಮಾಜ ಸರಿ ಇರಲು ಸಾಧ್ಯವಿಲ್ಲ. ಪ್ರತಿಯೊಬ್ಬ ಪ್ರಜೆಯೂ ತನಗೆ ವಹಿಸಿದ, ತಾನೇ ಆರಿಸಿಕೊಂಡ ಕೆಲಸವನ್ನು ಸರಿಯಾಗಿ ಮಾಡಬೇಕು. ಕೆಲಸ ಮಾಡದೆ ಪ್ರತಿಫಲ ಬಯಸುವುದು ಮತ್ತು ಪಡೆಯುವುದು ತಪ್ಪು. ಇದನ್ನೇ ಮನೆಯಲ್ಲಿ ಹಿರಿಯರೂ, ಶಾಲೆಯಲ್ಲಿ ಉಪಾಧ್ಯಾಯರೂ ಮಕ್ಕಳಿಗೆ ತಿಳಿಸಿ ಹೇಳಬೇಕಾಗಿದೆ. ಇವರು ಈ ಕೆಲಸವನ್ನು ಸರಿಯಾಗಿ ಮಾಡದೇ ಇರುವುದರಿಂದಲೇ ಈ ಗೊಂದಲಮಯ ಸಮಾಜ ನಿರ್ಮಾಣವಾಗಿದೆ. ಎಲ್ಲರಿಗೂ ಕೆಲಸ ಮಾಡದೆ ಫಲ ಬೇಕು. ಎಲ್ಲರಿಗೂ ಹಣ ಆಕಾಶದಿಂದ ಉದುರಬೇಕು. ಇದು ಸಾಧ್ಯವಿಲ್ಲದ ಮಾತು. ಇದು ಗೊತ್ತಿದ್ದರೂ ಎಲ್ಲರೂ ಇದನ್ನೇ ಬಯಸುತ್ತಾರೆ. ಕಷ್ಟಪಡಲು ಯಾರೂ ಇಚ್ಛಿಸುವುದಿಲ್ಲ. **"ಕೈ ಕೆಸರಾದರೆ ಬಾಯಿ ಮೊಸರು"** ಎಂಬ ಸಾರ್ವಕಾಲಿಕ ಸತ್ಯವನ್ನು ತಿಳಿಯಬೇಕು.

ನಾವು ಹೆಚ್ಚು ಉತ್ಪಾದನೆ ಮಾಡಿ ಕಡಮೆ ಉಪಯೋಗಿಸಬೇಕು, ಎಂದರೆ ನಮಗೆ ಬೇಕಾಗುವುದಕ್ಕಿಂತ ಹೆಚ್ಚು ಉತ್ಪಾದನೆ ಮಾಡಬೇಕು, ಗಳಿಸಬೇಕು, ಗಳಿಸಿ ಅದರಲ್ಲಿ ಉಳಿಸಬೇಕು, ಅದನ್ನೇ ಮತ್ತೆ ಬೆಳೆಸಬೇಕು. ಆಗಲೇ ಸಂಪದ್ಭರಿತ ಸಮಾಜ ಸಾಧ್ಯ. ಇದನ್ನು ಅರ್ಥ ಮಾಡಿಕೊಳ್ಳದೇ ಕೆಲವರು ಪ್ರಾಣಿಗಳಂತೆ ಜೀವಿಸುತ್ತಾರೆ. ಬೇರೆಯವರಿಗೆ, ಸಮಾಜಕ್ಕೆ ಹೊರೆಯಾಗುತ್ತಾರೆ.

ನಾವು ನೀವು ಸಮಾಜಜೀವಿಗಳು. ಅಂದರೆ ನಾವೂ ಸಹ ಸಮಾಜದ ಒಂದು ಭಾಗ. ನೀವು ಸಮಾಜಕ್ಕೆ ಏನನ್ನು ಕೊಡುತ್ತೀರಿ, ಏನನ್ನು ಕೊಡಲು ಇಚ್ಛಿಸುತ್ತೀರಿ ಎಂಬುದನ್ನು ಯೋಚಿಸಿರಿ. ಸಮಾಜ ನಿಮ್ಮಿಂದ ಏನನ್ನು ಬಯಸುತ್ತದೆ ಎಂದು ನೋಡಿ. ನೀವು ಏನನ್ನು ಸಮಾಜಕ್ಕೆ ಕೊಡುತ್ತೀರಿ, ಹೇಗೆ ಕೊಡುತ್ತೀರಿ ಎಂಬುದರ ಮೇಲೆ ಸಮಾಜ ನಿಮಗೆ ಏನು ಕೊಡಬಹುದು ಎಂದು ನಿರ್ಧರಿಸುತ್ತದೆ. ಇದು ಒಂದು ವ್ಯಾಪಾರದಂತೆ. ನಿಮ್ಮ ಮಾಲಿಗೆ ಸರಿಯಾದ ಬೆಲೆಯನ್ನು ನೀವು ಪಡೆಯುತ್ತೀರಿ. ನಿಮ್ಮ ಬೆಲೆ ಕಟ್ಟುವುದು ಸಮಾಜ. ಅದು ನಿಮ್ಮ ಬೆಲೆಯನ್ನು ತಿಳಿಸಿ ಹೇಳುವುದು. ಅದನ್ನು ಸಮಾಜ ಒಪ್ಪುವಂತೆ ದೃಢೀಕರಿಸಬೇಕಾದವರು ನೀವು. ವ್ಯಾಪಾರದಲ್ಲಿ ಸಹ ಇದೇ ಅಲ್ಲವೇ?

ಕೆಲಸದ ಆಯ್ಕೆ

ನಾವೆಲ್ಲರೂ ಸ್ವತಂತ್ರರು. ನಮಗೆ ಕೆಲಸವನ್ನು, ಉದ್ಯೋಗವನ್ನು, ಆರಿಸಿಕೊಳ್ಳುವ ಹಕ್ಕಿದೆ. ನಮಗೆ ಸರಿ ತೋರುವಂತಹ, ನಮ್ಮ ಕೈಯಲ್ಲಿ ಆಗುವಂತಹ, ನಾವು ಪರಿಣತಿ ಪಡೆದಿರುವ ಕೆಲಸವನ್ನು ಆಸಕ್ತಿಯಿಂದ ಮಾಡಬೇಕು. ನಮ್ಮ ಕೆಲಸದಿಂದ ನಮಗೂ ಸಂತೋಷವಾಗಬೇಕು. ಆ ಕೆಲಸದಿಂದ, ಆ ಕೆಲಸದ ಫಲದಿಂದ ಬೇರೆಯವರೂ ಸಂತೋಷ ಪಡೆಯಬೇಕು. ಸ್ವಹಿತ, ಪರಹಿತ ಎರಡನ್ನೂ ನಾವು ಕಾಪಾಡಿಕೊಂಡು ಬರಬೇಕು. ಅಂತಹ ಕೆಲಸವನ್ನು ಅಥವಾ ಉದ್ಯೋಗವನ್ನು ಮಾಡಬೇಕು.

> **ಸ್ವತಂತ್ರಭಾವನೆಯಿಂದ ಕೆಲಸ ಮಾಡಿ,**
> **ಪ್ರೇಮ ಭಾವನೆಯಿಂದ ಕೆಲಸ ಮಾಡಿ.**
>
> —ಸ್ವಾಮಿ ವಿವೇಕಾನಂದ

ಯಾವ ಕೆಲಸ ಮಾಡಬೇಕು, ಯಾವ ಕೆಲಸದಲ್ಲಿ ಹೆಚ್ಚು ಹಣ ಪಡೆಯಬಹುದು, ಯಾವ ಕೆಲಸ ನನ್ನಿಂದ ಸಾಧ್ಯ—ಇವೆಲ್ಲವನ್ನೂ ನಾವೇ ನಿರ್ಧರಿಸಿಕೊಳ್ಳಬೇಕು. ಯಾವ ಉದ್ಯೋಗ ಮಾಡಬಹುದು ಎಂಬುದು ನಿಮ್ಮ ಆಸಕ್ತಿ ಮತ್ತು ಅರ್ಹತೆಯ ಮೇಲೆ ನಿಂತಿದೆ. ಬರೀ ಕನಸು ಕಾಣುವುದು ಉಪಯೋಗವಿಲ್ಲ. ಕನಸನ್ನು ಸಾಕಾರಗೊಳಿಸುವುದು ಮುಖ್ಯ. ನಿಮ್ಮ ಭವಿಷ್ಯವು ಇಂದಿನ ನಿಮ್ಮ ಕಾರ್ಯಕ್ಷಮತೆಯ ಮೇಲೆ ನಿಂತಿದೆ. ಆದುದರಿಂದ ಸಮಯವನ್ನು ಹಾಳು ಮಾಡದೇ ಸದುಪಯೋಗ

ಪಡೆದು ನಿಮ್ಮ ಭವಿಷ್ಯವನ್ನು ವರ್ತಮಾನದಲ್ಲೇ ರೂಪಿಸಿ ಕೊಳ್ಳಿ. ನಾಳೆ ಎನ್ನುವುದು ಎಂದೂ ನಿಮಗೆ ಎಟುಕುವುದಿಲ್ಲ. ನಿಮ್ಮ ಆದಾಯವು ನಿಮ್ಮ ಕಾರ್ಯಕ್ಷಮತೆಯ ಮೇಲೆ ಎಂದರೆ ಸರಿಯಾದ ಕೆಲಸವನ್ನು ಸರಿಯಾದ ಸಮಯದಲ್ಲಿ ಉತ್ತಮ ವಾಗಿ ಮಾಡುವುದನ್ನು ಅವಲಂಬಿಸಿದೆ.

ನೀವು ಯಾವ ವಿಷಯದಲ್ಲಿ ಪರಿಣತಿ ಪಡೆದಿದ್ದೀರೊ ಅದನ್ನು ಆರಿಸಿಕೊಳ್ಳಬಹುದು. ಇದನ್ನು ನೀವು ನಿರ್ಧರಿಸ ಬಹುದೇ ಹೊರತು ಬೇರೆಯವರು ಹೇಳಲು ಸಾಧ್ಯವಿಲ್ಲ. ನಿಮಗೆ ಬಾಯಾರಿದೆಯೇ, ಹೊಟ್ಟೆ ಹಸಿದಿದೆಯೇ, ನಿಮಗೆ ಯಾವ ಆಹಾರ ಇಷ್ಟ ಎಂಬುದನ್ನು ನೀವೇ ಹೇಳಬೇಕು. ನಿಮಗೆ ಮಾತ್ರ ಇದು ಸರಿಯಾಗಿ ತಿಳಿಯಲು ಸಾಧ್ಯ. ಇದ ರಂತೆಯೇ ಉದ್ಯೋಗವೂ ಸಹ. ಇದನ್ನು ತಿಳಿಸುವ ಒಂದು ಹೇಳಿಕೆ ಇದೆ : "ನಿಮಗೆ ಇಷ್ಟವಾದ ಕೆಲಸವನ್ನು ಮಾಡಿರಿ ಅಥವಾ ನೀವು ಮಾಡುವ ಕೆಲಸವನ್ನು ಇಷ್ಟಪಡಿರಿ." ಕಾರಣ, ನಿಮ್ಮ ಮನಸ್ಸನ್ನು ಕೊಟ್ಟು, ನೀವು ಇಷ್ಟಪಟ್ಟು ಕೆಲಸ ಮಾಡಿದಾಗ, ಆ ಕೆಲಸ ಚೆನ್ನಾಗಿ ಆಗುತ್ತದೆ. ನಿಮಗೆ ಇಷ್ಟವಿಲ್ಲ ದಿದ್ದರೆ ಆ ಕೆಲಸ ಚೆನ್ನಾಗಿ ಆಗುವುದಿಲ್ಲ. ನಿಮ್ಮ ಸಮಯವೂ ವ್ಯರ್ಥ ಹಾಗೂ ಕೆಲಸವೂ ವ್ಯರ್ಥ. **He profits most, who serves best**—"ಅತ್ಯುತ್ತಮವಾಗಿ ಸೇವೆ ಸಲ್ಲಿಸುವವನು ಅತ್ಯುತ್ತಮ ಫಲ ಪಡೆಯುವನು."

### ಸದಾ ಕಲಿಯುತ್ತಿರಿ

ನಿಮ್ಮ ಆಯ್ಕೆ ಮತ್ತು ಜಾಣ್ಮೆಯ ಮೇಲೆ ನಿಮ್ಮ ಆದಾಯ ನಿರ್ಧಾರವಾಗುತ್ತದೆ. ಕೆಲವರಿಗೆ ಇದನ್ನು ತಿಳಿಯಲು ಕೆಲವು ತಿಂಗಳು ಸಾಕು, ಕೆಲವರಿಗೆ ಕೆಲವು ವರ್ಷಗಳೂ ಸಾಕಾಗದು.

ಪ್ರತಿಯೊಂದು ಕೆಲಸದಲ್ಲೂ ಎಲ್ಲ ವ್ಯವಹಾರದಲ್ಲೂ ಎಲ್ಲ ಉದ್ಯೋಗದಲ್ಲೂ ಲಾಭ ಇದೆ. ನೀವು ಯಾವ ಕೆಲಸ ಮಾಡು ತ್ತೀರಿ ಎನ್ನುವುದು ಮುಖ್ಯವಲ್ಲ, ನೀವು ಹೇಗೆ ಮಾಡುತ್ತೀರಿ ಎನ್ನುವುದೇ ಮುಖ್ಯ. ದಿನವೂ ಕಲಿಯಲೇಬೇಕು. ಕಲಿಕೆ ನಿರಂತರ ಸಾಗಿದಾಗಲೇ ನೀವು ನಿಮ್ಮ ಉದ್ಯೋಗದಲ್ಲಿ, ಉದ್ಯಮದಲ್ಲಿ ಮೇಲೇರಲು ಸಾಧ್ಯ. ನಿಮ್ಮ ಮನಸ್ಸಿನ ಶಕ್ತಿ, ನಿಮ್ಮ ಏಕಾಗ್ರತೆ, ನಿಮ್ಮ ಆಸಕ್ತಿ, ನಿಮ್ಮ ಜಾಣ್ಮೆ ಎಲ್ಲದರ ಮೇಲೂ ನಿಮ್ಮ ಕಲಿಕೆ ನಿಂತಿದೆ. ಕಲಿಕೆ ನಿರಂತರ ಸಾಗಿದಾಗಲೇ ಪ್ರಪಂಚದಲ್ಲಿ ಸಂತೋಷವಾಗಿರಲು ಸಾಧ್ಯ.

ಪ್ರತಿಯೊಬ್ಬರೂ ಒಂದೊಂದು ಗುರಿಯಿಟ್ಟುಕೊಳ್ಳಬೇಕು. ಅದಕ್ಕೆ ಸರಿಯಾಗಿ ತಮ್ಮ ತಿಳುವಳಿಕೆಯನ್ನು, ಮಾಹಿತಿಯನ್ನು ಗಳಿಸಿಕೊಳ್ಳಬೇಕು. ಯಾರಲ್ಲಿ ಯಾವ ರೀತಿ ಮಾಹಿತಿ ಪಡೆಯ ಬೇಕು ಎಂಬುದನ್ನು ವಿಚಾರಿಸಿ ಮುಂದುವರೆಯಬೇಕು.

ದೇವರು ದೇಹವನ್ನು ಕೊಟ್ಟಿದ್ದಾನೆ, ಮೆದುಳನ್ನೂ ಕೊಟ್ಟಿದ್ದಾನೆ. ದೇಹ ವಯಸ್ಸಿಗೆ ತಕ್ಕಂತೆ ಬೆಳೆಯುತ್ತದೆ. ಆದರೆ ಮೆದುಳನ್ನು ಬೆಳೆಸಬೇಕಾದವರು ನೀವೇ. ಅದರಲ್ಲಿ ಏನು ತುಂಬಬೇಕು ಎಂಬುದನ್ನು ದೇವರು ನಿಮ್ಮ ಆಯ್ಕೆಗೆ ಬಿಟ್ಟಿದ್ದಾನೆ. ಇಲ್ಲಿ ಪ್ರೀತಿ, ಶ್ರದ್ಧೆ, ಭಕ್ತಿಗಳ ಪಾತ್ರ ಹೆಚ್ಚು. ನಿಮಗೆ ಯಾರಮೇಲೆ, ಯಾವುದರ ಮೇಲೆ ಶ್ರದ್ಧಾಭಕ್ತಿ ಇದೆಯೋ ಅವರಿಂದ, ಅದರಿಂದ ಕಲಿಕೆ ಸುಲಭ. ಆದುದ ರಿಂದಲೇ ಗುರುಗಳ ಮೇಲೆ ಶ್ರದ್ಧಾಭಕ್ತಿಯನ್ನು ಇಡಬೇಕು ಎಂದು ಹೇಳುವುದು. ಕಲಿಯುವುದು ಎಂದರೆ ಇದೇ. ಕಲಿಯ ಬೇಕಾದುದು ಇದೇ. ಶಾಲೆಯಲ್ಲಿ ಕಲಿಸುವುದು ಇದನ್ನೇ. ಆದರೆ ನಿಮಗೆ ಸುಲಭವಾಗಿ ಅರ್ಥವಾಗಿರುವುದಿಲ್ಲ. ಇದನ್ನು ಕೆಲವರು ಬೇಗನೆ ಅರ್ಥಮಾಡಿಕೊಳ್ಳುತ್ತಾರೆ ಮತ್ತು ಕೆಲವರು ಜೀವ ಮಾನವನ್ನೇ ತೆಗೆದುಕೊಳ್ಳುತ್ತಾರೆ.

### ಪರಿಶ್ರಮ ಮತ್ತು ತಾಳ್ಮೆ ಇರಲಿ

ನಿಮ್ಮ ಶಕ್ತಿಯನ್ನೂ, ನ್ಯೂನತೆಗಳನ್ನೂ ತಿಳಿದುಕೊಳ್ಳಿರಿ. ನಿಮ್ಮ ಶಕ್ತಿಯನ್ನು ಹೇಗೆ ಹೆಚ್ಚಿಸಿಕೊಳ್ಳಬಹುದೆಂದು ನೀವೇ ವಿಚಾರ ಮಾಡಿ. ನ್ಯೂನತೆಗಳನ್ನು ಸರಿಪಡಿಸಿಕೊಳ್ಳಿರಿ. ಜೀವನ ದಲ್ಲಿ ಯಶಸ್ಸು ಪಡೆದವರನ್ನು ಕಂಡು ವಿಚಾರವಿನಿಮಯ ಮಾಡಿ ಕೊಳ್ಳಿರಿ. ಜೀವನದಲ್ಲಿ ನಿರಾಶರಾದವರನ್ನು ದೂರ ಇಡಿ. ಅವ ರಿಂದ ನಿಮಗೆ ಯಾವ ಉಪಯೋಗವೂ ಇಲ್ಲ. ಅವರು ಎಲ್ಲದ ರಲ್ಲೂ, ಎಲ್ಲರಲ್ಲೂ ಅಪಾಯವನ್ನೇ ಕಾಣುತ್ತಾರೆ.

ಯಶಸ್ಸು ಪಡೆದ ವ್ಯಕ್ತಿ ಎಲ್ಲ ಕೆಲಸದಲ್ಲೂ ಅವಕಾಶವನ್ನೇ ಕಾಣುತ್ತಾನೆ. ಲಾಭವನ್ನು ಕಾಣುತ್ತಾನೆ. ಕೆಲಸವು ಎಷ್ಟು ಕಷ್ಟ ವಾಗಿರುವುದೋ ಅಷ್ಟು ಹೆಚ್ಚು ಫಲ ಸಿಗುತ್ತದೆ. ಕೆಲವರಿಗೆ ಬಂಗಾರವು ಮಣ್ಣಾಗಿ ಕಾಣುವುದು, ಮತ್ತೆ ಕೆಲವರಿಗೆ ಮಣ್ಣು ಸಹ ಬಂಗಾರವಾಗಿ ಕಾಣುವುದು.

ಸುಲಭವಾದ ಕೆಲಸ ಮಾಡಲು ಹೆಚ್ಚು ಜನ ಮುಂದೆ ಬರು ತ್ತಾರೆ. ಅದರಲ್ಲಿ ಲಾಭವು ಕಡಮೆ, ಶ್ರಮ ಹೆಚ್ಚು ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿರಿ. ಜೀವನ ಒಂದು ಕಲೆ, ಒಂದು ಆಟ. ಇದರಲ್ಲಿ ಸೋಲು ಗೆಲುವು ಇದ್ದದ್ದೇ. ಸೋತೆನೆಂದು, ಎಡವಿದೆ ನೆಂದು, ಕುಳಿತುಕೊಳ್ಳದೆ ಎದ್ದು ಮತ್ತೆ ಆಡಲು ಪ್ರಾರಂಭಿಸಿರಿ. ಸೋಲು, ಗೆಲುವಿನ ಮೆಟ್ಟಿಲು, ಯಾವತ್ತೂ ಬೀಳಬಾರದು ಎನ್ನುವುದರಲ್ಲಿ ನಮ್ಮ ಹೆಚ್ಚುಗಾರಿಕೆಯೇನೂ ಇಲ್ಲ. ಬಿದ್ದಾಗಲೆಲ್ಲಾ ಎದ್ದು ನಿಲ್ಲಬೇಕೆನ್ನುವುದೇ ಹೆಚ್ಚುಗಾರಿಕೆ. ಯಾವುದನ್ನೂ ಒಂದು ದಿನದಲ್ಲಿ ಕಲಿಯಲು ಸಾಧ್ಯವಿಲ್ಲ. ನೀವೇ ನೋಡಿಕೊಳ್ಳಿ– ನೀವು ಸೈಕಲ್ ಕಲಿಯಲು ಎಷ್ಟು ದಿನ ಬೇಕಾಗಿತ್ತು, ಸಂಗೀತಗಾರನೆಂದು ಹೇಳಿಸಿಕೊಳ್ಳಲು ಭೀಮಸೇನ ಜೋಷಿಯವರಿಗೆ ಎಷ್ಟು ವರ್ಷ ಬೇಕಾಗಿತ್ತು ಎಂದು. ಒಂದು

ಮಗು ಊಟ ಮಾಡುವುದನ್ನು ಕಲಿಯಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂದು ತಿಳಿದುಕೊಂಡಾಗ ಯಾವುದನ್ನೂ ಒಂದು ದಿನದಲ್ಲಿ ಕಲಿಯಲು ಸಾಧ್ಯವಿಲ್ಲವೆಂದು ನಿಮಗೇ ಗೊತ್ತಾಗುತ್ತದೆ.

**ಸಮಯಪ್ರಜ್ಞೆ**

ಸಮಯದ ಉಪಯೋಗ ಬಹಳ ಮಹತ್ವದ್ದು. ಎಲ್ಲರಿಗೂ ಪ್ರಪಂಚದಲ್ಲಿರುವುದು ೨೪ ಘಂಟೆ ಮಾತ್ರ. ಅದನ್ನು ಹೇಗೆ ಉಪಯೋಗಿಸುತ್ತೇವೆ ಎಂಬುದರ ಮೇಲೆ ನಮ್ಮ ಏಳಿಗೆ ನಿಂತಿದೆ. ವಿದ್ಯಾರ್ಥಿಯ ಜೀವನದಲ್ಲಿ ಸಮಯ ಬಹಳ ಬೇಗ ಓಡುತ್ತಿರುತ್ತದೆ. ಒಂದೊಂದು ಕ್ಷಣವೂ ಮಹತ್ವದ್ದಾಗಿದೆ. ಇದರ ಸದುಪಯೋಗ ಬಹಳ ಮುಖ್ಯ. ಇವೆಲ್ಲದರ ಅರಿವಿದ್ದರೂ ನಾವು ಮಾಡುವ ಕೆಲಸವನ್ನು ಮುಂದೂಡುತ್ತೇವೆ ಅಥವಾ ಮಾಡುವುದೇ ಇಲ್ಲ. ಏಕೆ? ಎಂಬ ಪ್ರಶ್ನೆಯನ್ನು ನೀವೇ ಹಾಕಿಕೊಂಡು ಉತ್ತರ ಹುಡುಕಿರಿ.

> **ನೀವು ಏನು ಮಾಡುವುದಕ್ಕೂ ಸಮಯ ಸಿಕ್ಕುವುದಿಲ್ಲ, ಅದನ್ನು ನೀವೇ ಮಾಡಿಕೊಳ್ಳಬೇಕು.**
>
> —ಚಾರ್ಲ್ಸ್ ಬಕ್ಸ್‌ಟನ್ (*Charles Buckston*)

ಇದರ ಬಗ್ಗೆ ಪೂಜ್ಯರು, ಗುರುಗಳು ಚಿಂತನೆ ಮಾಡಿ ಬೆಳಕು ಚೆಲ್ಲಿದ್ದಾರೆ. ದೇಹ, ಮನಸ್ಸು, ಬುದ್ಧಿಗಳಲ್ಲಿ ನಮ್ಮ ಮನಸ್ಸಿನ ಪಾತ್ರ ಬಹಳ ಮುಖ್ಯ. ಆದುದರಿಂದಲೇ ಹಿರಿಯರು ಹೇಳುವುದು "ಮನಸ್ಸಿನಂತೆ ಮಹಾದೇವ" ಎಂದು. ನಮಗೆ ಮನಸ್ಸಿದ್ದಾಗ ಒಂದು ತರಹದ ತರ್ಕವನ್ನು ಮಾಡುತ್ತೇವೆ. ಇಲ್ಲದಿದ್ದರೆ ಮತ್ತೊಂದು ನೆಪ ಹೇಳುತ್ತೇವೆ. ಇದು ಒಂದು ನಾಣ್ಯದ ಎರಡು ಮುಖಗಳಿದ್ದಂತೆ.

**ಆತ್ಮವಿಶ್ವಾಸ**

ದೇವರು ಎಲ್ಲವನ್ನೂ ನಿಮಗೆ ಕೊಟ್ಟಿದ್ದಾನೆ. ದೇವರು ಕೊಟ್ಟಿರುವ ಇಂದ್ರಿಯಗಳನ್ನು ಕಣ್ಣು, ಕಿವಿ, ಮೂಗು, ಬಾಯಿ, ಕೈಕಾಲುಗಳನ್ನು, ಬುದ್ಧಿಯನ್ನು ಸರಿಯಾಗಿ ಉಪಯೋಗಿಸುವುದನ್ನು ಕಲಿಯಿರಿ. ಕಾರು ಅಥವಾ ಸ್ಕೂಟರ್ ತಂದಾಗ ಅದರ ರಚನೆಯನ್ನು ಉಪಯೋಗಿಸುವ ವಿಧಾನವನ್ನು ತಿಳಿದು ಉಪಯೋಗಿಸಿದಾಗ ಪ್ರಯೋಜನ ಹೆಚ್ಚು. ಅದರಂತೆ ನಿಮ್ಮ ದೇಹ, ಮನಸ್ಸು, ಬುದ್ಧಿಗಳ ಬಗ್ಗೆ ನಮ್ಮ ಹಿಂದಿನ ಋಷಿಗಳು ಬಹಳ ಚಿಂತನೆ ಮಾಡಿ ಉತ್ತಮವಾದ ಕೈಪಿಡಿಯನ್ನು ಬರೆದಿದ್ದಾರೆ. ಅದೇ ಭಗವದ್ಗೀತೆ. ಅದನ್ನು ಓದಿ ಅರ್ಥಮಾಡಿಕೊಂಡು ಪ್ರಯೋಜನ ಪಡೆಯಿರಿ.

ನಿಮ್ಮಲ್ಲಿ ಎಲ್ಲವೂ ಇವೆ. ಸೋಮಾರಿತನವನ್ನು ಬಿಟ್ಟು, ಅವಕಾಶಗಳನ್ನು ಉಪಯೋಗಿಸಿಕೊಳ್ಳಿ. ನಿಮಗೆ ನೀವೇ ಗುರುವಾಗಿರಿ. ಯಾರೂ ನಿಮ್ಮನ್ನು ಬೆಟ್ಟದ ಮೇಲೆ, ಸಿಂಹಾಸನದ ಮೇಲೆ ಕೂರಿಸುವುದಿಲ್ಲ. ಒಂದೊಂದೇ ಮೆಟ್ಟಿಲನ್ನು ಹತ್ತಿಹೋಗಬೇಕು. ಅದಕ್ಕೆ ಅರ್ಹತೆಯನ್ನು ಸಂಪಾದಿಸಬೇಕು. ದೃಢ ನಿರ್ಧಾರ ಬೇಕು. ನಿಮ್ಮನ್ನು ನೀವು ನಂಬಬೇಕು. ನಿಮ್ಮ ಸಾಮರ್ಥ್ಯವನ್ನು ನಂಬಬೇಕು. ನಿಮ್ಮನ್ನು ನೀವು ನಂಬದಿದ್ದರೆ ಬೇರೆಯವರು ಹೇಗೆ ನಿಮ್ಮನ್ನು ನಂಬುತ್ತಾರೆ. ಆಶಾವಾದವನ್ನು (Positive Thinking) ಬೆಳೆಸಿಕೊಳ್ಳಿ. ನಿರಾಶಾವಾದಿಯಾಗಬೇಡಿ.

ಆಗ ಮನಸ್ಸು ಅದಕ್ಕೆ ಸರಿಯಾದ ಚಿಂತನೆಗೆ ತೊಡಗುತ್ತದೆ. ನಾನು ಇದನ್ನು ಗೆಲ್ಲುತ್ತೇನೆ ಎಂದುಕೊಂಡಾಗ ಅದಕ್ಕೆ ಸರಿಯಾಗಿ ಚಿಂತನೆ ನಮಗೆ ತಿಳಿಯದೇ ಪ್ರಾರಂಭವಾಗುತ್ತದೆ. ನಾನು ಗೆಲ್ಲಲು ಸಾಧ್ಯವಿಲ್ಲ ಎಂದುಕೊಂಡಾಗ ಅದಕ್ಕೆ ಸರಿಯಾಗಿ ಕುಂಟುನೆಪ ಹುಡುಕುತ್ತದೆ. ಮನಸ್ಸು ಯಾವಾಗಲೂ ಗೆಲ್ಲಲು ಅಂದರೆ ಅದು ಅಂದುಕೊಂಡಂತೆ ಮಾಡಲು ಬಯಸುತ್ತದೆ. ಅಂದರೆ ಹೇಗೆ ಎಂದುಕೊಳ್ಳುತ್ತದೊ ಅದರಂತೆ ಮಾಡಲು ಬಯಸುತ್ತದೆ. ಗೆಲ್ಲುತ್ತೇನೆ ಎಂದುಕೊಂಡಾಗ ಗೆಲ್ಲುವ ಸಾಧ್ಯತೆಯೇ ಹೆಚ್ಚು. ಸೋಲುತ್ತೇನೆ ಎಂದಾಗ ಗೆಲ್ಲುವ ಸಾಧ್ಯತೆಯೇ ಇಲ್ಲ. ಮನಸ್ಸಿಲ್ಲದಾಗ ಕೆಲವು ಕುಂಟುನೆಪಗಳು ತೋರಿಕೊಳ್ಳುತ್ತದೆ. ನನಗೆ ಸಮಯವೇ ಇಲ್ಲ, ನನಗೆ ಹಣದ ಬೆಂಬಲ ಇಲ್ಲ, ನನಗೆ ಸಹಾಯ ಮಾಡುವ ಸ್ನೇಹಿತರೇ ಇಲ್ಲ, ನಾನು ಈ ಕೆಲಸ ಎಂದೂ ಮಾಡಿಲ್ಲ, ನನ್ನ ಅದೃಷ್ಟ ಸರಿ ಇಲ್ಲ, ಜಾತಕ ಸರಿ ಇಲ್ಲ, ನನ್ನನ್ನು ನೋಡಿದರೆ ಯಾರಿಗೂ ಆಗುವುದಿಲ್ಲ ಮುಂತಾದ ಕುಂಟುನೆಪಗಳು ನಮಗೆ ಯಾವಾಗಲೂ ರೆಡಿಮೇಡ್ ಆಗಿರುತ್ತವೆ. ಆದರೆ ನಾವು ಗೆಲ್ಲಲೇ ಬೇಕು ಎಂದು ಛಲ ತೊಟ್ಟಾಗ ತೊಂದರೆಗಳೆಲ್ಲವನ್ನೂ ನಿವಾರಿಸಿಕೊಂಡು ಗೆಲ್ಲುತ್ತೇವೆ. ನಾನು ಮಾಡಬಲ್ಲೆ, ನಾನು ಮಾಡುತ್ತೇನೆ, ನಾನು ಮಾಡಲೇಬೇಕು ಎಂಬ ಚಿಂತನೆಗಳನ್ನು ನಾವು ಹೊಂದಿರಬೇಕು.

**ಯಶಸ್ಸಿನ ಗುಟ್ಟು**

ಯಶಸ್ಸು ಎಂಬ ಮೂರು ಅಕ್ಷರದ ಪದ ಸಮಬಾಹು ತ್ರಿಭುಜದ ಮೂರು ಬಾಹುಗಳಿದ್ದಂತೆ. ಇದರ ವಿಸ್ತಾರ ಹೆಚ್ಚಬೇಕಾದರೆ ಮೂರೂ ಬಾಹುಗಳನ್ನು ಬೆಳೆಸಬೇಕಾಗುತ್ತದೆ. ತ್ರಿಭುಜ ರಚಿಸಲು ಮೂರು ಬಾಹುಗಳು ಹೇಗೆ ಮುಖ್ಯವೋ ಹಾಗೆಯೇ ಯಶಸ್ಸನ್ನು ಪಡೆಯಲು ಮೂರು ಘಟಕಗಳು ಮುಖ್ಯ. ಮೊದಲನೆಯ ಬಾಹುವೇ ವಿದ್ಯಾಭ್ಯಾಸ, ಮಾಹಿತಿ, ಜ್ಞಾನ, ಅನುಭವ, ಸತತ ಪ್ರಯತ್ನ—ಇದೇ ತಳಹದಿ. ಎರಡನೆಯ ಬಾಹುವೇ ಜಾಣ್ಮೆ, ಕೆಲಸ ಮಾಡುವ ಕಲೆ, ಮಾಡಿಸುವ ಕಲೆ, ನಿಮ್ಮ ಬುದ್ಧಿಶಕ್ತಿ ಎಂದು ಹೇಳಬಹುದು. ನೀವು ಸಂಪಾ

ವಿಸಿದ ಜ್ಞಾನವನ್ನು ಉಪಯೋಗಕಾರಿಯಾಗುವಂತೆ ಅಳವಡಿಸಿಕೊಳ್ಳುವುದೇ ಕೌಶಲ. ಮೂರನೆಯ ಬಾಹು ಯಾವುದೆಂದರೆ ವ್ಯಕ್ತಿತ್ವ. ವ್ಯಕ್ತಿತ್ವದಲ್ಲಿನ ಮೂರು ಮುಖ್ಯವಾದ ಅಂಶಗಳೆಂದರೆ: ಅ) ಸಂವಹನ ಸಾಮರ್ಥ್ಯ. ಆ) ಜ್ಞಾಪಕ ಶಕ್ತಿ. ಇ) ಮಾನವೀಯ ಸಂಬಂಧಗಳು.

**ಸಂವಹನ ಸಾಮರ್ಥ್ಯ** ನಮ್ಮ ಭಾವನೆಗಳನ್ನು, ನಮಗೆ ಏನು ಬೇಕು ಎಂಬುದನ್ನು ಸ್ಪಷ್ಟವಾಗಿ ಬೇರೆಯವರಿಗೆ ತಿಳಿಸಲು ಬರಬೇಕು. ಹಾಗೆಯೇ ಬೇರೆಯವರು ಹೇಳಿದುದನ್ನು ಅರ್ಥ ಮಾಡಿಕೊಳ್ಳಲು ಬರಬೇಕು. ಮಾತನಾಡುವ ಧ್ವನಿ, ಮಾತನಾಡುವ ರೀತಿಯಲ್ಲಿಯೇ ಸಾಕಷ್ಟನ್ನು ಅರ್ಥಮಾಡಿಕೊಳ್ಳಬಹುದು. ಶಾರೀರಿಕ ಚಿಹ್ನೆಗಳಿಂದಲೂ ಬೇರೆಯವರ ಭಾವನೆಗಳನ್ನು ತಿಳಿದುಕೊಳ್ಳಬಹುದು. ಬಹಳ ಸಲ ನಮಗೇನು ಬೇಕು ಎಂಬುದು ನಮಗೇ ಗೊತ್ತಿರುವುದಿಲ್ಲ. ನಾನು ಏಕೆ ಮಾತನಾಡುತ್ತಿದ್ದೇನೆ. ಯಾರೊಂದಿಗೆ ಮಾತನಾಡುತ್ತಿದ್ದೇನೆ, ಅದರಿಂದ ನನಗೇನು ಬೇಕು, ಏನನ್ನು ಬಯಸಿದ್ದೇನೆ ಎಂಬುದು ಸ್ಪಷ್ಟವಾಗಿ ನಮಗೆ ತಿಳಿದಿರಬೇಕು.

**ಜ್ಞಾಪಕ ಶಕ್ತಿ** : ಇದೂ ಸಹ ಮುಖ್ಯವಾದದ್ದು. ಜ್ಞಾಪಕವಿಲ್ಲದಿದ್ದರೆ ಏನನ್ನೂ ಮಾಡಲು ಸಾಧ್ಯವಿಲ್ಲ. ಕಲಿತುದುದನ್ನು ಜ್ಞಾಪಕದಲ್ಲಿಟ್ಟುಕೊಂಡು ಅದನ್ನು ಉಪಯೋಗಿಸಲು ಬರಬೇಕು. ಅಂದರೆ ನಿಮಗೆ ಬೇಕಾದ ವಿಷಯ ಬೇಕಾದ ಸಮಯದಲ್ಲಿ ಜ್ಞಾಪಕಕ್ಕೆ ಬರಬೇಕು.

> *ಪುಸ್ತಕದಲ್ಲಿರುವುದು ಮಸ್ತಕಕ್ಕೇರಬೇಕು. ಮಸ್ತಕದಿಂದ ಹಸ್ತಕ್ಕೆ ಇಳಿಯಬೇಕು, ಅಂದರೆ ಕಾರ್ಯಗತವಾಗಬೇಕು. ಆಗಲೇ ಸಿದ್ಧಿ.*

ಇದು ವ್ಯವಸ್ಥಿತವಾದ ತರಬೇತಿಯಿಂದ ಸಾಧ್ಯ. ಒಂದು ವಿಷಯವನ್ನು ಅದು ಮುಖ್ಯ ಎಂದು ತಿಳಿದು ಅದನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಿರಬೇಕು. ಏಕಾಗ್ರತೆಯಿದ್ದಾಗ ಅಂದರೆ ದೇಹ, ಮನಸ್ಸು, ಬುದ್ಧಿ ಒಂದೇ ಕಡೆ ಇದ್ದಾಗ, ನಮ್ಮ ಗ್ರಹಣಶಕ್ತಿ ಚೆನ್ನಾಗಿರುತ್ತದೆ, ವಿಷಯ ಅರ್ಥವಾಗುತ್ತದೆ. ಅರ್ಥವಾದ ವಿಷಯ ಹೆಚ್ಚು ದಿನ ನಮ್ಮ ಜ್ಞಾಪಕದಲ್ಲಿರುತ್ತದೆ. ಆಸಕ್ತಿ, ತೊಡಗಿಸಿಕೊಳ್ಳುವಿಕೆ ಮತ್ತು ಮುಂಬರಿಕೆ (Interest, Involvement, Follow-up) ಇವು ನಮ್ಮ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಲು ಅನುಕೂಲ. 3R ವಿಧಾನ—Read, Record, Reproduce(ಓದುವುದು, ದಾಖಲಿಸುವುದು ಮತ್ತು ಪ್ರತಿ ಮಾಡುವುದು)ದಿಂದಲೂ ಅನುಕೂಲವಿದೆ. ಮನಸ್ಸು ಪ್ರಶಾಂತವಾಗಿರಬೇಕು. ಆತಂಕ ತುಂಬಿದ ಮನಸ್ಸಿಗೆ ಜ್ಞಾಪಕಶಕ್ತಿ ಕಡಿಮೆ. ಸಿನಿಮಾ ನೋಡಿದಾಗ ಹೆಚ್ಚು ಜ್ಞಾಪಕವಿರುವುದು ಇದಕ್ಕೇ. ಯಾವುದೇ ಚಿಂತೆ ಇಲ್ಲದೇ ತಲ್ಲೀನರಾಗಿ ಸಿನಿಮಾ ನೋಡುವುದೇ ಜ್ಞಾಪಕವಿರುವುದಕ್ಕೆ ಕಾರಣ.

**ವ್ಯಕ್ತಿ-ವ್ಯಕ್ತಿಗಳ ನಡುವೆ ಸಂಬಂಧ** : ಮನುಷ್ಯ ಬೇರೆ ವ್ಯಕ್ತಿಗಳೊಡನೆ ಬೆರೆಯುವುದು, ಸಹಬಾಳ್ವೆ ನಡೆಸುವುದು ಅನಿವಾರ್ಯ. ಬೇರೆಯವರಿಗೆ, ಅವರ ಭಾವನೆಗಳಿಗೆ ತೊಂದರೆ ಆಗದಂತೆ ವ್ಯವಹರಿಸಬೇಕು. ನಾವು ಒಳ್ಳೆಯವರಾಗಿ ಬಾಳಬೇಕು. ಆಗಲೇ ನೆಮ್ಮದಿ ಸಾಧ್ಯ. ಇಲ್ಲದಿದ್ದರೆ ಮನಸ್ತಾಪ, ಜಗಳ, ಯುದ್ಧ ತಪ್ಪಿದ್ದಲ್ಲ. ಇಲ್ಲಿ ಒಂದು ಗಾದೆ ಉದಾಹರಿಸಬಹುದು: "ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ." ಇದು ಅಕ್ಷರಶಃ ಸತ್ಯ. ಎಲ್ಲರನ್ನೂ ಸ್ನೇಹಿತರಂತೆ ನೋಡಿಕೊಳ್ಳಬೇಕು, ಸ್ನೇಹ ಗಳಿಸಬೇಕು, ಸ್ನೇಹ ಬೆಳೆಸಬೇಕು ಮತ್ತು ಸ್ನೇಹ ಉಳಿಸಬೇಕು. ನಮ್ಮ ಮನಸ್ಸು, ಚಿಂತನೆ ಮತ್ತು ಚಾರಿತ್ರ್ಯ ಒಳ್ಳೆಯದಾಗಿರಬೇಕು. ಆಗ ಮಾತ್ರ ನಮ್ಮ ಮಾತು ಹೃದಯಕ್ಕೆ ಹತ್ತಿರವಾಗಿ ಚೆನ್ನಾಗಿರುತ್ತದೆ. ಎಲ್ಲರೂ ನಮ್ಮನ್ನು ಇಷ್ಟಪಡುತ್ತಾರೆ, ಸ್ನೇಹಜೀವಿ ಎನಿಸಿಕೊಳ್ಳುತ್ತೇವೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ವ್ಯಕ್ತಿತ್ವದಲ್ಲಿ ನಮ್ರತೆ ಮುಖ್ಯ ಎಂಬುದನ್ನು ನಾವು ಗಮನದಲ್ಲಿಡಬೇಕು. ❄

## ವಿಪತ್ತಿನಲ್ಲೂ ಮೌಲ್ಯ

೧೯೧೪ರಲ್ಲಿ ಬೆಂಕಿ ಅಪಘಾತದಲ್ಲಿ ಥಾಮಸ್ ಎಡಿಸನ್‌ರ ಕೈಗಾರಿಕೋದ್ಯಮಗಳು ಹಾಳಾದಾಗ ಎಡಿಸನ್‌ರವರು ಎರಡು ದಶಲಕ್ಷ ಡಾಲರ್‌ಗಳಷ್ಟು ಮೌಲ್ಯದ ಉಪಕರಣಗಳು ಮತ್ತು ಅಮೂಲ್ಯ ದಾಖಲೆಗಳನ್ನು ಕಳೆದುಕೊಂಡರು. ಎಡಿಸನ್ ಅವರ ಮಗ ಚಾರ್ಲ್ಸ್ ತನ್ನ ತಂದೆಯನ್ನು ಹುಡುಕಿಕೊಂಡು ಬಂದಾಗ ಅವರು ಬೆಂಕಿ ಎದುರು ನಿಂತಿದ್ದರು. ಚಳಿಗಾಲದ ಗಾಳಿ ಅವರ ಬೆಳ್ಳೂದಲನ್ನು ಹಾರಾಡಿಸುತ್ತಿದ್ದುದು ಕಾಣಿಸಿತು. ತನ್ನ ವಯಸ್ಸಾದ ತಂದೆಯ ಸ್ಥಿತಿಯನ್ನು ನೋಡಿ ಅವನಿಗೆ ನೋವಾಯಿತು.

ಎಡಿಸನ್ ಚಾರ್ಲ್ಸ್‌ನನ್ನು ನೋಡಿ, "ನಿಮ್ಮಮ್ಮ ಎಲ್ಲಿ? ಅವಳನ್ನು ತಕ್ಷಣ ಹುಡುಕಿಕೊಂಡು ಇಲ್ಲಿಗೆ ಕರೆದುಕೊಂಡು ಬಾ. ಅವಳು ಬದುಕಿರುವವರೆಗೂ ಇಂಥ ದೃಶ್ಯವನ್ನು ಅವಳು ಮತ್ತೆ ಕಾಣಲಾರಳು!" ಎಂದು ಹೇಳಿದರು. ತಮ್ಮ ಅಸಂಖ್ಯಾತ ಕನಸುಗಳ ಮತ್ತು ಭರವಸೆಗಳ ಬೂದಿ ರಾಶಿಯ ಮೇಲೆ ಮಾರನೆಯ ದಿವಸ ನಡೆದಾಡುತ್ತಾ, ೬೭ ವರ್ಷದ ಎಡಿಸನ್, "ವಿಪತ್ತು, ಅನರ್ಥದಲ್ಲೂ ಎಂಥಾ ಮಹಾನ್ ಮೌಲ್ಯವಿದೆ! ನಮ್ಮೆಲ್ಲಾ ತಪ್ಪುಗಳೂ ಈಗ ಸುಟ್ಟು ಹೋಗಿವೆ. ದೇವರಿಗೆ ವಂದನೆಗಳು! ನಾವು ಹೊಸದಾಗಿ ಜೀವನ ಶುರುಮಾಡಬಹುದು" ಎಂದರು.

(ಸಂಗ್ರಹ : ಹಿರಿಯರ ಹಾದಿ ಗ್ರಂಥದಿಂದ
ಸಂಪಾದಕರು : ಟಿ.ವಿ. ವೆಂಕಟರಮಣಯ್ಯ)